ತಗಡೂರು – ಕಲ್ಕುಂದ ರಸ್ತೆಯನ್ನು ಲೋಕೋಪಯೋಗಿ ಇಲಾಖೆಗೆ ಸೇರಿಸಲು ಒತ್ತಾಯ

1666: ಶ್ರೀ ಎಂ. ಶ್ರೀನಿವಾಸಯ್ಯ (ಟಿ. ನರಸೀಪುರ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನಂಜನಗೂಡು ತಾಲ್ಲೂಕು ತಗಡೂರು ಕಲ್ಕುಂದ ಮಾರ್ಗವಾಗಿ ಟಿ. ನರಸೀಪುರ ರಸ್ತೆಯವರೆಗೆ ಹಾಗೂ ಹೊಸಕೋಟೆಯಿಂದ ವರುಣ ರಸ್ತೆ ಜಿಲ್ಲಾ ಪರಿಷತ್‌ನಿಂದ ಲೋಕೋಪಯೋಗಿ ಇಲಾಖೆಗೆ ಸೇರಿಸಲು ಸಾರ್ವಜನಿಕರಿಂದ ಮನವಿ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಸದರಿ ರಸ್ತೆಗಳಿಗೆ ಡಾಂಬರ್ ಹಾಕಿಸಿ ದುರಸ್ತಿ ಮಾಡಲಾಗುವುದು ಯಾವಾಗ;

ಇ) ಕುರುಬೂರುನಿಂದ ಕೊತ್ತೇಗಾಲ ಮಾರ್ಗವಾಗಿ ಸಿ. ಹಳ್ಳಿವರೆಗೆ ಡಾಂಬರ್ ರಸ್ತೆ ಮಾಡುವುದು ಯಾವಾಗ ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) 1) ನಂಜನಗೂಡು ತಾಲ್ಲೂಕು ತಗಡೂರಿನಿಂದ ಕಲ್ಕುಂದ ಮಾರ್ಗವಾಗಿ ಟಿ. ನರಸೀಪುರ ರಸ್ತೆಯನ್ನು ಲೋಕೋಪಯೋಗಿ ಇಲಾಖೆಗೆ ಸೇರಿಸಲು ಸಾರ್ವಜನಿಕರಿಂದ ಮನವಿ ಬಂದಿಲ್ಲ.

2) ಹೊಸಕೋಟೆ–ವರುಣ ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸಿ ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳಬೇಕೆಂದು ಮನವಿ ಬಂದಿದೆ.

ಆ) 1) ಜಿಲ್ಲಾಪರಿಷತ್ ವತಿಯಿಂದ ಪ್ರಸ್ತುತದಲ್ಲಿ ಹೊಸಕೋಟೆ –ವರುಣ ರಸ್ತೆಗೆ 5.00 ಲಕ್ಷ ರೂ.ಗಳ ಅಂದಾಜಿನಲ್ಲಿ ಡಾಂಬರ್ ಮಾಡಲು ಉದ್ದೇಶಿಸಲಾಗಿದೆ.

2) ತಗಡೂರಿನಿಂದ ಕಲ್ಕುಂದ ಮಾರ್ಗ ಟಿ. ನರಸೀಪುರದವರೆಗೆ ಇರುವ ರಸ್ತೆಗೆ ಪ್ರಸ್ತುತ ಸಾಲಿಗೆ ಅನುದಾನವು ಇಲ್ಲದಿರುವ ಕಾರಣ ಡಾಂಬರೀಕರಣವನ್ನು ತೆಗೆದುಕೊಂಡಿರುವುದಿಲ್ಲ.

ಇ) ಸಧ್ಯದಲ್ಲಿ ಪ್ರಸ್ತಾಪ ಇರುವುದಿಲ್ಲವೆಂದು ಜಿಲ್ಲಾ ಪರಿಷತ್ತಿನವರಿಂದ ತಿಳಿದು ಬಂದಿದೆ.

ತಾಂಡವಾಪುರ – ರಾಂಪುರ ರಸ್ತೆ ರಿಪೇರಿ

1667: ಶ್ರೀ ಎಂ. ಶ್ರೀನಿವಾಸಯ್ಯ, (ಟಿ. ನರಸೀಪುರ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನಂಜನಗೂಡು ತಾಲ್ಲೂಕು ತಾಂಡವಪುರದಿಂದ ರಾಂಪುರದವರೆಗೆ ಜಿಲ್ಲಾ ಪರಿಷತ್ ರಸ್ತೆಯಾಗಿದ್ದು ಲೋಕೋಪಯೋಗಿ ಇಲಾಖೆಗೆ ವರ್ಗಮಾಡಿ ರಸ್ತೆ ದುರಸ್ತಿ (ಡಾಂಬರ್) ಮಾಡಲು ಕೋರಲಾಗಿದೆಯೇ;

ಆ) ತೊರೆಮಾವುನಿಂದ ಇಮ್ಮಾವು ಗ್ರಾಮದವರೆಗೆ ರಸ್ತೆ ದುರಸ್ತಿ ಮಾಡಿಸುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):– ಅ) ನಂಜನಗೂಡು ತಾಲ್ಲೂಕು ತಾಂಡವಪುರದಿಂದ ರಾಮಾಪುರದ ರಸ್ತೆಯ ಭಾಗವಾದ ಬಿದರ ಗೂಡಿನಿಂದ ರಾಮಪುರದವರೆಗಿನ ರಸ್ತೆಯು ಲೋಕೋಪಯೋಗಿ ಇಲಾಖೆ [illegible]

ರಸ್ತೆಯ ಭಾಗವು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿದ್ದು ಈ ಭಾಗದ ರಸ್ತೆಯನ್ನು ಮೇಲ್ದರ್ಜೆಗೇರಿಸುವಂತೆ ಸಾರ್ವಜನಿಕರಿಂದ ಮನವಿ ಬಂದಿಲ್ಲ.

ಆ) ಈ ರಸ್ತೆಯು ಜಿಲ್ಲಾಪರಿಷತ್ ವ್ಯಾಪ್ತಿಯಲ್ಲಿದ್ದು ಜಿಲ್ಲಾ ಪರಿಷತ್ತಿನವರು ದುರಸ್ತಿ ಮಾಡಿಸುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ.

ಟಿ. ನರಸೀಪುರ ಕ್ಷೇತ್ರದ ರಸ್ತೆಗಳ ದುರಸ್ತಿ

1668: ಶ್ರೀ ಎಂ. ಶ್ರೀನಿವಾಸಯ್ಯ (ಟಿ. ನರಸೀಪುರ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಟಿ. ನರಸೀಪುರ ಕ್ಷೇತ್ರಕ್ಕೆ ಸೇರಿದ ಮೂಗೂರುನಿಂದ ಟಿ. ನರಸೀಪುರಕ್ಕೆ ಹಾಗೂ ಮೂಗೂರುನಿಂದ ಕೊಳ್ಳಗಾಲ ಹಾಗೂ ಸಂತೇಮಾರಹಳ್ಳಿವರೆವಿಗೂ ಲೋಕೋಪಯೋಗಿ ಇಲಾಖೆಗೆ ಸೇರಿದ್ದು ರಸ್ತೆ ಬಹಳ ದುಸ್ಥಿತಿಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಆ ರಸ್ತೆಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ದುರಸ್ತಿಗೊಳಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಬಂದಿದೆ.

ಆ) ಈ ರಸ್ತೆಯ ಅತಿ ಕೆಟ್ಟು ಹೋದ ಭಾಗಗಳನ್ನು (3.15 ಕಿಮೀ.) ದುರಸ್ತಿಪಡಿಸುವ ಕಾಮಗಾರಿ ಪ್ರಗತಿಯಲ್ಲಿದ್ದು ಸಂಚಾರಕ್ಕೆ ತೊಂದರೆ ಆಗದಂತೆ ನೋಡಿಕೊಳ್ಳಲಾಗುತ್ತದೆ.

ಟಿ. ನರಸೀಪುರದಿಂದ ನಂಜನಗೂಡಿನವರೆಗೆ ರಸ್ತೆ ದುರಸ್ತಿ ಕಾರ್ಯ

1669: ಶ್ರೀ ಎಂ. ಶ್ರೀನಿವಾಸಯ್ಯ (ಟಿ. ನರಸೀಪುರ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಟಿ. ನರಸೀಪುರದಿಂದ ನಂಜನಗೂಡಿನವರೆಗೆ ರಸ್ತೆಯು ದುಸ್ಥಿತಿಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಇದನ್ನು ದುರಸ್ತಿ ಮಾಡಲು ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಬಂದಿದೆ.

ಆ) ಈ ರಸ್ತೆಯ ಅತಿಕೆಟ್ಟು ಹೋದ ಭಾಗಗಳ ದುರಸ್ಥಿಯನ್ನು ಮಾಡಲಾಗುತ್ತಿದೆ. ಹಾಗೂ 6ನೇ ಕಿ.ಮೀ ನಿಂದ 8ನೇ ಕಿ.ಮೀವರೆವಿಗೆ ರಸ್ತೆಯನ್ನು ಡಾಂಬರೀಕರಿಸಲಾಗುತ್ತಿದೆ. ಲಭ್ಯವಿರುವ ನಿರ್ವಹಣ ಅನುದಾನದಿಂದ ಈ ರಸ್ತೆಯನ್ನು ಅದಷ್ಟು ಮಟ್ಟಿಗೆ ಸುಸ್ಥಿತಿಯಲ್ಲಿಡಲಾಗುತ್ತಿದೆ.

ಹಿರೇಕೆರೂರು ತಾಲ್ಲೂಕು ಮದಗ – ಮಾಸೂರು ನೀರಾವರಿ ಕೆರೆ ಅಭಿವೃದ್ಧಿ

1670: ಶ್ರೀ ಬಿ.ಹೆಚ್. ಬನ್ನಿಕೋಡ (ಹಿರೇಕೆರೂರು):– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?